ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್:- ವಿಧೇಯಕವನ್ನು ಮಂಡಿಸಲಾಗಿದೆ.

(3) ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ 1992

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಮಂತ್ರಿಗಳ ಪರವಾಗಿ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ, 1992ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಹೀಗಿದೆ, ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ 1992ನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡಿಸಲು ಅನುಮತಿ ನೀಡಲಾಯಿತು

ಶ್ರೀ ಎಂ.ವೀರಪ್ಪ ಮೊಯಿಲಿ :(ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, 1992ರ ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್:- ವಿಧೇಯಕವನ್ನು ಮಂಡಿಸಲಾಗಿದೆ.

(4) ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವಿಧೇಯಕ, 1992 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಂ.ಎಸ್.ಪಾಟೀಲ್: (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ : 1992ರ ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ಮಂಡಿಸಲು ಅನುಮತಿ ನೀಡಲಾಯಿತು.

ಶ್ರೀ ಎಂ.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, 1992ರ ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಛೇರ್ಮನ್:- ವಿಧೇಯಕವನ್ನು ಮಂಡಿಸಲಾಗಿದೆ.

ಬ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

(1) 1992 ರ ಕನ್ನಡ ವಿಶ್ವವಿದ್ಯಾನಿಲಯದ (ತಿದ್ದುಪಡಿ) ವಿಧೇಯಕ.

(ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ವಿಶ್ವವಿದ್ಯಾನಿಲಯಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎಂ.ವೀರಪ್ಪ ಮೊಯಿಲಿ: (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ಕನ್ನಡ ವಿಶ್ವವಿದ್ಯಾನಿಲಯ 1991ರ ಮಸೂದೆ ಏನಿದೆ ಅದರಲ್ಲಿ ಅಧಿನಿಯಮ 44, 45, 46 ಇದರಲ್ಲಿ ಕೆಲವು ನ್ಯೂನತೆಗಳಿದ್ದವು. ಈ ತಿದ್ದುಪಡಿಯಲ್ಲಿ ಯಾವುದೂ ಕೂಡ ಹೊಸ ವಿಚಾರವನ್ನು

ನಮೂದಿಸಿಲ್ಲ ಅಥವಾ ವಿಶ್ವವಿದ್ಯಾನಿಲಯದ ಸ್ವರೂಪದಲ್ಲಿ ಯಾವುದೇ ರೀತಿಯ ಬದಲಾವಣೆಗಳಿಲ್ಲ. ಆ ಒಂದು 44 ಮತ್ತು 45ನೇ ತಿದ್ದುಪಡಿಯನ್ನು ಏನು ಈಗ ಸೂಚನೆ ಮಾಡುತ್ತಿದ್ದೇವೆ ಅದ ಇಷ್ಟೇ. ಏನೆಂದರೆ ಅಲ್ಲಿ 'ಪ್ರಕರಣಗಳಿಗೆ ನೇಮಕ ಮಾಡತಕ್ಕುದ್ದು" ಎನ್ನುವ ಪದಗಳಿಗೆ ಮುಂಚೆ " ರಾಜ್ಯ ಸರ್ಕಾರವು" ಎನ್ನುವ ಪದ ಬರಬೇಕಾಗಿತ್ತು. ಬೈ ಮಿಸ್ಟೇಕ್ " ರಾಜ್ಯ ಸರ್ಕಾರ" ಎನ್ನತಕ್ಕದ್ದು ಬಿಟ್ಟು ಹೋಗಿದೆ. ಅದನ್ನು ಸೇರಿಸುವುದು ಅಷ್ಟೇ. ಆಮೇಲೆ 46ನೇ ಪ್ರಕಾರದಲ್ಲಿ "ಗ್ರಂಥಪಾಲರು" ಎಂದು ಪದ ತಪ್ಪಾಗಿ ಬಿದ್ದಿದೆ. ಅದನ್ನು "ಹಣಕಾಸು ಅಧಿಕಾರಿ" ಎಂದು ಮಾಡಬೇಕು. ಅದು ಒಂದು ತಪ್ಪು ಆಗಿದೆ. ಮತ್ತೆ 46 ರಲ್ಲಿ "ನೇಮಕ ಮಾಡತಕ್ಕುದು" ಎನ್ನುವುದಕ್ಕಿಂತ ಮುಂಚೆ ' ರಾಜ್ಯ ಸರ್ಕಾರ' ಎಂದು ಒಂದು ಪದ ಸೇರಿಸಬೇಕಾಗಿದೆ. ಇದರ ಹೊಸದಾದ ಪ್ರಸ್ತಾವವಾಗಲೀ, ವಿಚಾರವಾಗಲೀ ಏನೂ ಇರುವುದಿಲ್ಲ. ಇದು ಟೈರೋಗ್ರಫಿಕಲ್ ಮಿಸ್ಟೇಕ್ ಇರಬಹುದು, ಪ್ರಿಂಟಿಂಗ್ ಎರರ್ ಇರಬಹುದು, ಮುದ್ರಾರಾಕ್ಷಸ ಇರಬಹುದು. ಇದನ್ನು ಸರಿಪಡಿಸತಕ್ಕ ತಿದ್ದುಪಡಿ ಅಷ್ಟೇ.

ಶ್ರೀ ಬಿ.ಹೆಚ್.ಬನ್ನೀಕೋಡ್:-(ಹೀರೇಕೆರೂರ್):- ಮಾನ್ಯ ಅಧ್ಯಕ್ಷರೇ, ನಿನ್ನೆಯದಿವಸ ಸುಮಾರು 1 ಡಜನ್ ವಿಧೇಯಕಗಳನ್ನು ಮಂಡಿಸಿ ಆ ನಂತರ ಒಪ್ಪಿಗೆ ಕೊಟ್ಟಿದ್ದೇನೆ. ಇವತ್ತೂ ನಾಲ್ಕೈಂಟು ವಿಧೇಯಕಗಳನ್ನು ಮಂಡಿಸಿದೆ. ಸರ್ಕಾರ ಪೂರ್ವಾಪರ ಆಲೋಚನೆ ಮಾಡದೇ, ಪರಿಶೀಲನೆ ಮಾಡದೇ ತಂದಾಗ ಇಂತಹ ತಪ್ಪುಗಳು ಆಗುತ್ತವೆ. ವಿವೇಚನೆಯಿಂದ ಅಧಿಕಾರಿಗಳೇ ಆಗಲೀ, ಮಂತ್ರಿಗಳೇ ಆಗಲಿ ಪೂರ್ವದಲ್ಲಿ ವಿವರವಾಗಿ ಪರಿಶೀಲನೆ ಮಾಡದೇ ಹೋದರೆ, ಇಡೀ ರಾಜ್ಯಕ್ಕೆ ಕೊಡತಕ್ಕ ಇಂತಹ ಕಾನೂನುಗಳನ್ನು ತಂದಾಗ ಹೀಗೆ ಆಗುತ್ತದೆ. ಇವತ್ತು ಪೂರ್ತಿ ನೋಡಿ ಪರಿಶೀಲನೆ ಮಾಡಿ ಅರ್ಥಗರ್ಭಿತವಾದ ಕಾನೂನು ತರುವುದು ಈ ಸದನದ ಆದ್ಯ ಕರ್ತವ್ಯ. ಅದನ್ನು ಬಿಟ್ಟು ಆತುರವಾಗಿ ಮಾಡುವುದು ಸರಿಯಲ್ಲ. ಇದಕ್ಕೆ ಕಾನೂನು ತರುವ ಪೂರ್ವದಲ್ಲಿ ರಾಜ್ಯ ಸರ್ಕಾರ ಎನ್ನುವುದನ್ನೇ ಬಿಟ್ಟಿದ್ದಾರೆ. ಹಾಗಾದರೆ ಯಾವ ಸರ್ಕಾರ ಎನ್ನುವ ಪ್ರಶ್ನೆ ಬರುತ್ತದೆ. ಇಂತಹ ತಪ್ಪುಗಳು ಆಗದ ರೀತಿಯಲ್ಲಿ ಸರ್ಕಾರದಲ್ಲಿ ಕರ್ತವ್ಯ ವಹಿಸುವವರಿಗೆ ದಯಮಾಡಿ ಹೇಳಬೇಕು. ಮತ್ತೆ ಪುನಃ ಈ ರೀತಿಯ ತಪ್ಪುಗಳು ಆಗದ ಹಾಗೆ ನೋಡಿಕೊಳ್ಳುವ ಬಗ್ಗೆ ಸೂಕ್ತ ನಿರ್ದೇಶನ ಕೊಡಬೇಕೆಂದು ನಿಧಾನವಾಗಿ ಪೂರ್ವಬಾವಿಯಾಗಿ ವಿಚಾರ ಮಾಡಿ ಚರ್ಚೆಗೆ ಸಾಕಷ್ಟು ಅವಕಾಶ ಕೊಟ್ಟು ಕಾನೂನು ಪಾಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:(ಶಿವಮೊಗ್ಗ):- ಸನ್ಮಾನ್ಯ ಅಧ್ಯಕ್ಷರೇ, ಈ ರೀತಿ ವಿಧೇಯಕಗಳು ಒಟ್ಟಿಗೇ ಮಂಡನೆ ಆಗುತ್ತಿರುವುದನ್ನು ನಾನು ವಿಧಾನಸಭೆಯ ಸದಸ್ಯನಾದಾಗಿನಿಂದಲೂ ನೋಡುತ್ತಿದ್ದೇನೆ. ಯಾವ ವಿಧೇಯಕಗಳು ನಾಳೆ ವಿಧಾನಸಭೆಯಲ್ಲಿ ಬರುತ್ತದೋ ಅಂತಹವನ್ನು ಬೆಳಗಿನ ಜಾವ ನಮ್ಮ ಕೊಠಡಿಗೆ 10-15 ಬಂಡಲ್‌ಗಳನ್ನು ತಂದು ಹಾಕುತ್ತಾರೆ. ನಮಗೆ ಅವುಗಳ ಬಗ್ಗೆ ಸ್ಪಡಿ ಮಾಡುವುದಕ್ಕೆ ಅವಕಾಶವೇ ಇರುವುದಿಲ್ಲ. ಹೇಗಿದ್ದರೂ ತಮಗೆ ಇಂತಹ ಮಸೂದೆಗಳನ್ನು ತರಬೇಕೆಂದು ಮೊದಲೇ ಗೊತ್ತಿರುತ್ತದೆ. ಅಂತಹ ವಿಧೇಯಕಗಳನ್ನು ನಮಗೆ ಮುಂಚಿತವಾಗಿ ಕೊಟ್ಟರೆ ಪೂರ್ಣವಾಗಿ ನಾವು ಓದಿ ತಿಳಿದುಕೊಂಡು ಬಂದು ಸೂಕ್ತ ಸಲಹೆಗಳನ್ನು ಕೊಡುವುದಕ್ಕೆ ನಮಗೆ ಅವಕಾಶವಾಗುತ್ತದೆ. ಈ ಸಾರಿ ಏನೋ ಆಯಿತು, ಬಹುಮತ ಇರುವುದರಿಂದ ನಾವು ಬೇಡ ಎಂದರೂ ಬಿಲ್ ಪಾಸ್ ಮಾಡಿಕೊಳ್ಳುತ್ತಾರೆ. ಆದರೆ ನನ್ನ ಕಳಕಳಿಯ ಮನವಿ ಎಂದರೆ, ಮುಂದಿನಬಾರಿ ಕನಿಷ್ಟ ಪಕ್ಷ ವಿಧೇಯಕ ಮಂಡನೆ ಮಾಡುವುದಕ್ಕೆ ಒಂದು ವಾರದ ಮುಂಚೆ ನಮಗೆ ಕೊಟ್ಟರೆ ಅದನ್ನು ಸರಿಯಾಗಿ ಅಧ್ಯಯನ ಮಾಡುವುದಕ್ಕೆ, ಸಲಹೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಸರ್ಕಾರ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ ಅದನ್ನು ಸರ್ಕಾರ ಸಂಪೂರ್ಣವಾಗಿ ಸ್ವೀಕಾರ ಮಾಡುತ್ತದೆ. ತಾವು ಕೊಟ್ಟ ಸೂಚನೆಯನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ : " 1992 ನೇ ಕನ್ನಡ ವಿಶ್ವವಿದ್ಯಾನಿಲಯ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಛೇರ್ಮನ್:- "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1ಇತ್ಯಾದಿ:

ಛೇರ್ಮನ್:- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ವೀರಪ್ಪ ಮೊಯಿಲಿ: (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, " 1992ರ ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ " 1992 ಕನ್ನಡ ವಿಶ್ವವಿದ್ಯಾನಿಲಯ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(2) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾ ನಿಲಯ ವಿಧೇಯಕ, 1992

ಪರ್ಯಾಲೋಚನಾ ಪ್ರಸ್ತಾವ :

ಶ್ರೀ ಎಂ.ವೀರಪ್ಪ ಮೊಯಿಲಿ :(ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, " 1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

(ಪ್ರಸ್ತಾವ ಮಂಡಿಸಲಾಯಿತು)

ಶ್ರೀ ಎಂ.ವೀರಪ್ಪ ಮೊಯಿಲಿ :(ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಈವೊಂದು ಶಿಕ್ಷಣ ವ್ಯವಸ್ಥೆಯಲ್ಲಿ ಅದರಲ್ಲೂ ಕೂಡ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಇದು ಒಂದು ಹೊಸ ಯುಗವನ್ನು ಕರ್ನಾಟಕ ರಾಜ್ಯದಲ್ಲಿ ಪ್ರಾರಂಭಮಾಡುತ್ತಿದ್ದೇವೆ. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಈಗ ಉನ್ನತ ಶಿಕ್ಷಣ ಕೆಲವೇ ಜನರಿಗೆ ದಕ್ಕತಕ್ಕದ್ದಾಗಿದೆ. ತಮಗೆ ಆಶ್ಚರ್ಯವಾಗಬಹುದು, ಅದರ ಬಗ್ಗೆ ಸ್ವಲ್ಪ ವಿವರಣೆ ಕೊಡುತ್ತೇನೆ. ಅಂಕಿಸಂಖ್ಯೆಯನ್ನು ನೋಡಿದರೂ ಕೂಡ ಒಟ್ಟು ನಮ್ಮ ನಮ್ಮ ಪ್ರಾಮಾಣಿಕ ಪ್ರಯತ್ನ ಮಾಡಿದರೂ ಕೂಡ 100 ಮಕ್ಕಳು ಒಂದನೆಯ ತರಗತಿಗೆ ಸೇರುವುದಕ್ಕೆ ಅರ್ಹತೆ ಇದ್ದರೂ ಆ ವಯಸ್ಸಿನಲ್ಲಿ ಕೇವಲ 34 ಪರ್ಸೆಂಟ್ ಮಾತ್ರ ಪ್ರಥಮ ತರಗತಿಗೆ ಸೇರುತ್ತಾರೆ. ಈ ದುರ್ವ್ಯವಸ್ಥೆ ನಮ್ಮ ರಾಷ್ಟ್ರದಲ್ಲಿದೆ. ಈಗಲೂ ಕೂಡ ಎರಡನೆಯ ತರಗತಿಗೆ ಬರುವಾಗ 34 ಪರ್ಸೆಂಟ್ ಇದ್ದದ್ದು 27